ನಂಜೇಗೌಡರು ತಮ್ಮ ಭಾಷಣವನ್ನು ಮುಂದುವರೆಸಬೇಕಾಗಿದೆ. ಬಿ.ಪಿ. ಎಲ್.ಗೆ ಸಂಬಂಧಿಸಿದ ಹೇಳಿಕೆ ಮತ್ತು ಎಲ್ಲವನ್ನೂ ಮುಖ್ಯಮಂತ್ರಿಗಳು ಕೊಡಲು ಸಿದ್ಧರಿದ್ದಾರೆ. ಟೈಂ ಅಡ್ಜಸ್ಟ್ ಮಾಡಿಕೊಂಡು ನಾನು ಮಾಡಿಸಿ ಕೊಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಾನು ಒಂದು ಪ್ರಿವಿಲೇಜ್ ಮೋಷನ್ ಮೂವ್ ಮಾಡಿದ್ದೆ.

ಅಧ್ಯಕ್ಷರು : ನಿಮ್ಮ ಪ್ರಿವಿಲೇಜ್ ಮೋಷನ್ ಬಗ್ಗೆ ಇವತ್ತೊಂದು ದಿವಸ ನನಗೆ ಅವಕಾಶ ಕೊಡಿ. Finally, I will have a word with the Hon. Chief Minister & Law Minister & then take a decision about it.

ಶ್ರೀ ಎನ್. ಯೋಗೀಶ್ ಭಟ್ : ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ತಮ್ಮ ಸಮ್ಮತಿ ಕೇಳಿದ್ದೆ.

ಅಧ್ಯಕ್ಷರು : ಅನಾಥಾಶ್ರಮಗಳ ವಿಚಾರವಲ್ಲವೇ? ಅದಕ್ಕೆ ಮಂತ್ರಿಗಳು ಸಮಯ ಕೇಳಿದ್ದಾರೆ, ನಾಳೆ ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ನೀವು ಇವತ್ತು ಬೆಳಿಗ್ಗೆ ನೋಟೀಸ್ ಕೊಟ್ಟಿದ್ದೀರಿ, ಮೊದಲೇ ಕೊಟ್ಟಿದ್ದರೆ ಅವರು ಉತ್ತರ ತರಿಸಿ ಕೊಡುತ್ತಿದ್ದರು. ಅದನ್ನು ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಒಂದು ವಿಚಾರವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಮೊನ್ನೆ ಸೂಚನೆ ಕೊಟ್ಟಿದ್ದೆ.

ಅಧ್ಯಕ್ಷರು : ಮೊನ್ನೆ ನೀವು ಆಬ್ಸೆಂಟ್ ಆಗಿದ್ದೀರಿ. ನಾನು ಕರೆದಾಗ ನೀವು ಸದನದಿಂದ ಹೊರಟು ಹೋಗಿದ್ದೀರಿ. ನನಗೂ ನಿಮ್ಮ ಹಾಗೆಯೇ ಬಹಳ ಕೆಲಸಗಳು ಇವೆ, ಆದರೂ ನಾನು ಇರುತ್ತೇನೆ.

ಶ್ರೀ ಅಗರ ಜ್ಞಾನೇಂದ್ರ : ನಾನು ಆಸ್ಪತ್ರೆಗೆ ಹೋಗಿದ್ದೆ. ಆದ್ದರಿಂದ ಇರಲು ಆಗಲಿಲ್ಲ.

ಅಧ್ಯಕ್ಷರು : ಆಯಿತು, ಅದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ಎಜ್ಯುಕೇಷನ್ ಡಿಪಾರ್ಟ್‌ಮೆಂಟಿನ ಪ್ರಸ್ತಾಪಕ್ಕೆ ಉತ್ತರ ಬಂದಿಲ್ಲ. 45 ದಿನಗಳಾಯಿತು.

ಅಧ್ಯಕ್ಷರು : ಆ ಉತ್ತರ ನಾಳೆ ಬರುತ್ತದೆ. ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ.

ಗಮನ ಸೆಳೆಯುವ ಸೂಚನೆಗಳು

(ಅ) ನೈರುತ್ಯ ರೈಲ್ವೆ ವಲಯವನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ಸ್ಥಳಾಂತರಿಸುವ ಬಗ್ಗೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆಯ ಕೊನೆಯಲ್ಲಿ ತಾವು, ನೈರುತ್ಯ ರೈಲ್ವೆ ವಲಯದ ಬಗ್ಗೆ ಕೇಳಿ ಎಂದು ಈಗ ಸದನದಲ್ಲಿ ಹೇಳಿದ್ದೀರಿ. ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ನೈರುತ್ಯ ರೈಲ್ವೆ ವಲಯ ಹುಬ್ಬಳ್ಳಿಯಲ್ಲಿ ಸ್ಥಾಪನೆಯಾಗಲು ಬೆಂಗಳೂರಿನಿಂದ ಹುಬ್ಬಳ್ಳಿಗೆ ವರ್ಗವಾಗಿ ಹೋಗಿದೆ ಎನ್ನತಕ್ಕಂಥ ಹೇಳಿಕೆಯ ಬಗ್ಗೆ ಒಂದು ರೀತಿಯಾದಂಥ ಗೊಂದಲ ಸೃಷ್ಟಿಯಾಗಿದೆ.

ಈ ಬಗ್ಗೆ ಮಾಜಿ ಪ್ರಧಾನಿಗಳಾದಂಥ ದೇವೆಗೌಡರೂ ಸಹ, ಅದು ಅಲ್ಲಿ ಹೋಗತಕ್ಕಂಥಾದ್ದು ಸರಿಯಲ್ಲ, ಅದು ಬೆಂಗಳೂರಿನಲ್ಲೇ ಇರಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಜೊತೆಗೆ, ಹುಬ್ಬಳ್ಳಿಗೆ ಒಂದು ಬೇರೆ ವಲಯ ಕೊಡಿ ಎನ್ನತಕ್ಕಂಥ ಮಾತನ್ನೂ ಹೇಳಿದ್ದಾರೆ. ಇದು ಅತ್ಯಂತ ಪ್ರಮುಖವಾದಂಥ ಪ್ರಶ್ನೆ. ಇದು ಕರ್ನಾಟಕ ರಾಜ್ಯ. ರೈಲ್ವೆ ವಲಯ ಬೆಂಗಳೂರಿನಲ್ಲಾದರೇನು, ಹುಬ್ಬಳ್ಳಿಯಲ್ಲಾದರೇನು, ಧಾರವಾಡದಲ್ಲಾದರೇನು, ಇದು ಕರ್ನಾಟಕ ಒಳಗಡೆ ಇರತಕ್ಕಂಥಾದ್ದು. ಕರ್ನಾಟಕ ಬಿಟ್ಟು ತಮಿಳುನಾಡಿಗೆ ಹೋಗಿದ್ದರೆ, ಆಂಧ್ರಕ್ಕೆ ಹೋಗಿದ್ದರೆ ಅಥವಾ ಕೇರಳಕ್ಕೆ ಹೋಗಿದ್ದರೆ ನಮ್ಮ ರಾಜ್ಯಕ್ಕೆ ಕೈಬಿಟ್ಟು ಹೋಯಿತು ಎಂದು ನಾವು ಇದರ ಬಗ್ಗೆ ಟೀಕೆ ಮಾಡಿ ಕೇಂದ್ರ ಸರ್ಕಾರದ ವಿರುದ್ಧ ಹೋರಾಟ ಮಾಡತಕ್ಕಂಥಾದ್ದು ಒಂದು ಕ್ರಮ. ಆದರೆ ಬಹಳ ವರ್ಷಗಳಿಂದ, ನೈರುತ್ಯ ರೈಲ್ವೆ ವಲಯ ಹುಬ್ಬಳ್ಳಿಗೆ ಬೇಕು ಎಂದು ಅಲ್ಲಿನ ಜನ ಕೇಳುತ್ತಿದ್ದರು. ಉತ್ತರ ಕರ್ನಾಟಕ ಭಾಗ ಸಂಪೂರ್ಣ ನಾಶವಾಗುತ್ತಿದೆ, ಅದರ ಬೆಳವಣಿಗೆ ಇಲ್ಲ, ಅದರ ಅಭಿವೃದ್ಧಿ ಇಲ್ಲ, ಅದು ಸಂಪೂರ್ಣ ಕ್ಷೀಣವಾಗುತ್ತಿದೆ. 1956ರಲ್ಲಿ ಕರ್ನಾಟಕ ಏಕೀಕರಣವಾದ ಮೇಲೆ ಇಲ್ಲಿಯವರೆಗೆ ಸಮಗ್ರ ಬೆಳವಣಿಗೆಯಾಗಿಲ್ಲ. ಅದರ ಬಗ್ಗೆ ಅಲ್ಲಿನ ಜನರ ಕ್ಷೋಭೆ ಇದೆ. ಇಂಥಾದ್ದರಲ್ಲಿ ಹುಬ್ಬಳ್ಳಿಗೆ ಹೋದಂಥ ರೈಲ್ವೆ ವಲಯವನ್ನು ತಡೆಹಿಡಿಯ ಬೇಕು, ಇದು ಬೆಂಗಳೂರಿನಲ್ಲೇ ಇರಬೇಕು ಎಂದು ಹೇಳತಕ್ಕಂಥಾದ್ದು ಪ್ರಾಮಾಣಿಕವಾದ ಚಿಂತನೆಯಲ್ಲ. ಒಂದು ಮಾತನ್ನು ನಾನು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ, ಅದು ದೇವೇಗೌಡರಾಗಲೀ ಅಥವಾ ಇನ್ನೊಬ್ಬರಾಗಲೀ, ಅವರಿಗೆ ಈ ಸಂದರ್ಭದಲ್ಲಿ ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ, ಬೆಂಗಳೂರಿಗೂ ಮತ್ತೊಂದು ಬೇರೆ ವಲಯವನ್ನು ತರೋಣ. ಹುಬ್ಬಳ್ಳಿಗೆ ಹೋಗಿರತಕ್ಕಂಥಾದ್ದು ಹುಬ್ಬಳ್ಳಿಯಲ್ಲೇ ಇರಲಿ. ಬೆಂಗಳೂರಿಗೆ ಕೊಡಬೇಕಾಗಿರತಕ್ಕಂಥಾದ್ದನ್ನು ಕೈ ಬಿಡಬೇಕು ಎನ್ನುವುದು ನಮ್ಮ ಉದ್ದೇಶವಲ್ಲ, ನಾವೆಲ್ಲರೂ ಒಗ್ಗಟ್ಟಾಗಿ ಮಾನ್ಯ ಮುಖ್ಯ ಮಂತ್ರಿಗಳ ನಾಯಕತ್ವದಲ್ಲಿ ಪ್ರಧಾನಿಯನ್ನು ಭೇಟಿ ಮಾಡಿ ಬೆಂಗಳೂರಿಗೆ ಇನ್ನೊಂದು ವಲಯ ಕೊಡಿ ಎಂದು ಕೇಳೋಣ. ಬೇರೆ ರಾಜ್ಯಗಳಲ್ಲಿ ಎರಡೆರಡು ವಲಯವನ್ನು ಕೊಟ್ಟಿದ್ದಾರೆ. ಅಂಥಾದ್ದನ್ನು ನಿದರ್ಶನವಾಗಿ ಇಟ್ಟುಕೊಂಡು ಕೇಳೋಣ. ಬೆಂಗಳೂರಿಗೂ ಒಂದು ವಲಯವಾಗಲಿ. ಅದರ ಬಗ್ಗೆ ಯಾರದೂ ತಕರಾರಿಲ್ಲ. ಆದರೆ ಹುಬ್ಬಳ್ಳಿಗೆ ಹೋಗಿರತಕ್ಕಂಥಾದ್ದನ್ನು ತಡೆಹಿಡಿಯತಕ್ಕಂಥಾದ್ದಕ್ಕೆ ನಾವು ಯಾರೂ ಕೈ ಹಾಕಬಾರದು ಎಂದು ಕಳಕಳಿಯಿಂದ ಮನವಿ ಮಾಡುತ್ತೇನೆ. ಕರ್ನಾಟಕ ರಾಜ್ಯ ಎರಡು ಭಾಗವಾಗತಕ್ಕಂಥ ನಿರ್ಧಾರಕ್ಕೆ ಬರುವುದು ಬೇಡ. ಎರಡು ಚಿಂತನೆ ಆಗಬಾರದು ಎನ್ನುವ ಮಾತನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳಿ, ಈ ಬಗ್ಗೆ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳನ್ನು ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

+ ಶ್ರೀ ಹೆಚ್. ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಜನ ನೆಮ್ಮದಿಯಾಗಿ ಇರುತ್ತಾರೆ. ಅವರ ನೆಮ್ಮದಿಯನ್ನು ತಪ್ಪಿಸುವುದು ಸರ್ಕಾರವೇ. ಅದು ಯಾವುದೇ ಸರ್ಕಾರವಿರಬಹುದು, ಕೇಂದ್ರ ಸರ್ಕಾರವಿರಬಹುದು ಅಥವಾ ರಾಜ್ಯ ಸರ್ಕಾರವಿರಬಹುದು. ಈಗ ಜಬ್ಬಲ್‌ಪುರ - ಬಿಲಾಸ್‌ಪುರಗಳ ಅಂತರ ಇರತಕ್ಕಂಥಾದ್ದು 200 ಕಿ.ಮೀ. ಅಲ್ಲಿಗೆ ಎರಡು ವಲಯಗಳನ್ನು ಕೊಡುತ್ತಾರೆ. ಅದೇ ರೀತಿ ಕರ್ನಾಟಕಕ್ಕೆ ಏಕೆ ಎರಡು ವಲಯಗಳನ್ನು ಕೊಡಬಾರದು? ಹುಬ್ಬಳ್ಳಿಗೆ ಬೇಡ ಎಂದರೆ ಆ ಜನರಿಗೆ ನೋವಾಗುತ್ತದೆ, ಶಿಫ್ಟ್ ಮಾಡುತ್ತೇನೆ ಎಂದರೆ ಈ ಭಾಗದ ಜನರಿಗೆ ನೋವಾಗುತ್ತದೆ. ಈ ಭಾಗದ ಜನ ಮತ್ತು ಆ ಭಾಗದ ಜನ ಕುಸ್ತಿ ಮಾಡಲು ಎನ್ನುವ ವ್ಯವಹಾರವಿದು. ಕುಸ್ತಿ ಮಾಡುವ ವ್ಯವಹಾರವನ್ನು ಮಾಡತಕ್ಕಂಥಾದ್ದು ಸರ್ಕಾರಕ್ಕೆ ಶೋಭಿಸುವುದಿಲ್ಲ.

ಯಡಿಯೂರಪ್ಪನವರ ಪತ್ರದ ಆಧಾರದ ಮೇಲೆ ಕೇಂದ್ರದವರು ಶಿಫ್ಟ್ ಮಾಡುವುದಕ್ಕೆ ಆರ್ಡರ್ ಮಾಡಿದ್ದಾರೆ. ಅದರ ವಿವರಗಳು ನನಗೆ ಗೊತ್ತಿದೆ. ನಾನು ಅದನ್ನು ಪ್ರಶ್ನೆ ಮಾಡುವುದಿಲ್ಲ. ನನ್ನ ಬಿ.ಜೆ.ಪಿ. ಮಿತ್ರರುಗಳಲ್ಲಿ ವಿನಂತಿಸಿಕೊಳ್ಳುತ್ತೇನೆ, ಅಲ್ಲೂ ಒಂದು ವಲಯ ಮತ್ತು ಇಲ್ಲೂ ಒಂದು ವಲಯ ಇರುವ ಹಾಗೆ ನೀವು ದಯವಿಟ್ಟು ಕೇಂದ್ರ ಸರ್ಕಾರಕ್ಕೆ ಒತ್ತಾಯ ತರಬೇಕು. ಇಲ್ಲಿಂದ ಶಿಫ್ಟ್ ಆದರೆ ಇಲ್ಲಿ ಹಚ್ಚಿ ಕೊಡುವವರಿಗೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಶಿಫ್ಟ್ ಮಾಡಲಿಲ್ಲ ಎಂದರೆ ಅಲ್ಲಿ ಗಲಾಟೆ ಮಾಡುವವರಿಗೆ ಅವಕಾಶ ಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ಈ ರಾಜ್ಯವನ್ನು ನೆಮ್ಮದಿಯಾಗಿ ಇರುವ ಹಾಗೆ ಮಾಡಿ. ಎರಡೂ ಕಡೆ ಒಂದೊಂದು ವಲಯ ಆಗುವ ಹಾಗೆ ಸರ್ಕಾರವೂ ಪ್ರಯತ್ನ ಪಡಲಿ, ನೀವೂ ದಯವಿಟ್ಟು ಪ್ರಯತ್ನ ಪಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀಮತಿ ಪ್ರಮೀಳಾ ನೇಸರ್ಗಿ : ಸನ್ಮಾನ್ಯ ದೇವೇಗೌಡರು ಪತ್ರ ಬರೆದಿದ್ದಾರೆ. ಆ ಪತ್ರದ ಕಾಪಿ ನನ್ನ ಹತ್ತಿರ ಇದೆ. ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ನೈರುತ್ಯ ವಲಯವನ್ನು ಹುಬ್ಬಳ್ಳಿಗೆ ಕೊಡಬೇಕು ಎಂದು ಸನ್ಮಾನ್ಯ ದೇವೇಗೌಡರು ಬರೆದಿರತಕ್ಕಂಥ ಪತ್ರದ ನಕಲು ನನ್ನ ಹತ್ತಿರ ಇದೆ. ಆದ್ದರಿಂದ ಸನ್ಮಾನ್ಯ ನಂಜೇಗೌಡರು ಹೇಳಿದ ಹಾಗೆ ಅದು ಯಡಿಯೂರಪ್ಪನವರು ಬರೆದುದ್ದಲ್ಲ. ದೇವೇಗೌಡರು ಬರೆದಿದ್ದಾರೆ. ಯಡಿಯೂರಪ್ಪನವರೂ ಬರೆದಿದ್ದಾರೆ. 28 ಜನ ಎಂ.ಪಿ. ಗಳಲ್ಲಿ 27 ಎಂ.ಪಿ.ಗಳೂ ಕೂಡ ಬರೆದಿದ್ದಾರೆ. ಆ ಒಂದು ವಲಯ ಇಲ್ಲೂ ಬರಲಿ, ಅದನ್ನು ಕೇಳುವುದರಲ್ಲಿ ತಪ್ಪಿಲ್ಲ. ಆದರೆ,

ಅಧ್ಯಕ್ಷರು : ನೇಸರ್ಗಿಯವರೇ, ನಾನು ಹೇಳುವುದನ್ನು ದಯಮಾಡಿ ಕೇಳಿ. ಇದು ಒಂದು ಅಭಿವೃದ್ಧಿ ಕಾರ್ಯ. ನಮ್ಮ ವಿಧಾನ ಸಭೆಯಲ್ಲಿ ಇದರ ಬಗ್ಗೆ ಎರಡು ಬಗೆಯ ಅಭಿಪ್ರಾಯಗಳು ಬಂದವು ಎನ್ನುವುದಕ್ಕೆ ಅವಕಾಶ ಕೊಡುವುದು ಬೇಡ. ಮಾನ್ಯ ನಂಜೇಗೌಡರು ಬಹಳ ಜವಾಬ್ದಾರಿಯಿಂದ ಮಾತನಾಡಿದ್ದಾರೆ. ಅದೂ ಇರಬೇಕು, ಇದೂ ಮುಂದುವರೆಯಬೇಕು ಎನ್ನುವುದನ್ನು ಹೇಳಿದ್ದಾರೆ. ನಾವೆಲ್ಲರೂ ಅದಕ್ಕೆ ಹೊಂದಿಕೊಳ್ಳುವ ರೀತಿಯಲ್ಲಿ ಮಾತನಾಡೋಣ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಬೇಡ ಎಂದು ಯಾರೂ ಹೇಳುತ್ತಿಲ್ಲ. ಆದರೆ ಬಿ.ಜೆ.ಪಿ. ಮಿತ್ರರಿಗೆ ಹೇಳುವಂಥಾದ್ದು ಅಲ್ಲ ಅದು.

ಅಧ್ಯಕ್ಷರು : ಅವರು ಹೇಳಿದ ಉದ್ದೇಶವೆಂದರೆ, ನಿಮ್ಮ ಪಕ್ಷಕ್ಕೆ ಸೇರಿದಂಥವರು ದೇಶದ ಪ್ರಧಾನ ಮಂತ್ರಿಗಳಾಗಿದ್ದಾರೆ. ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ, ಆ ಪಕ್ಷದವರು ಹೇಳಿದರೆ ಅದಕ್ಕೆ ಹೆಚ್ಚು ಒತ್ತು ಬರುತ್ತದೆ ಎನ್ನು ಉದ್ದೇಶದಿಂದ ಅವರು ಹೇಳಿದ್ದು. ಹಾಗಾದರೆ ವಾಜಪೇಯಿಯವರು ನಿಮ್ಮ ಪಕ್ಷದವರಲ್ಲವೇ?

ಅಧ್ಯಕ್ಷರು : ಬೆಲ್ಲದ್‌ರವರೇ, ಈಗ ನೀವು ಯಾವ ವಿಚಾರವನ್ನು ಹೇಳುತ್ತಿದ್ದೀರಿ, ಅವರು ತಮ್ಮನ್ನು ಸಮರ್ಥಿಸಿಕೊಳ್ಳಲು ಇಲ್ಲಿಲ್ಲ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್: ಹುಬ್ಬಳ್ಳಿಗೆ ರೈಲ್ವೆ ವಲಯ ಬೇಕು ಎಂದು ಎಂ.ಪಿ. ಯಾದಾಗಲೂ ಹೇಳಿದ್ದಾರೆ.

ಅಧ್ಯಕ್ಷರು : ಬೆಲ್ಲದ್‌ರವರೇ, ದಯಮಾಡಿ ಕೇಳಿ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಒಟ್ಟಿಗೆ ಏಕೆ ಹೇಳುತ್ತೀರಿ? ರೆಡ್ಡಿಯವರೇ, ನಿಮ್ಮನ್ನು ಮೊದಲ ಸಾಲಿನಲ್ಲಿ ಕೂರಿಸಿರುವುದು ಏಕೆಂದರೆ ನಿಮಗೆ ಸ್ಪೆಷಲ್ ಆನರ್ ಇದೆ. ನೀವು ಏಕೆ ಎಲ್ಲದಕ್ಕೂ ಎದ್ದು ನಿಲ್ಲುತ್ತೀರಿ?

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ : ಹುಬ್ಬಳ್ಳಿ ಬಹಳ ಯೋಗ್ಯವಾದಂಥ ಸ್ಥಳ. ಎಲ್ಲಾ ಜನರ ಅಪೇಕ್ಷೆ ಕೂಡ ಅದಾಗಿದೆ. ಟೆಕ್ನಿಕಲ್ ಸಹ ಯೋಗ್ಯವಾದಂಥ ಸ್ಥಳ ಅದು.

ಅಧ್ಯಕ್ಷರು : ಹೆಚ್ಚು ಜನ ಮಾತನಾಡಿ ಈ ಕೇಸನ್ನು ಹಾಳು ಮಾಡುತ್ತೀರಿ. ದಯಮಾಡಿ ಸ್ವಲ್ಪ ಸುಮ್ಮನಿರಿ. ಈಗ ಸುರೇಶ್ ಕುಮಾರ್‌ರವರೇ, ತಾವು ಪ್ರಾರಂಭ ಮಾಡಿ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ : ಕರ್ನಾಟಕದ ಕನ್ನಡಿಗರ ಹಿತದೃಷ್ಟಿಯಿಂದ, ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಆಗಬೇಕು. ಅದು ಉತ್ತರ ಕರ್ನಾಟಕ ಎಂದು ಅಲ್ಲ, ಕನ್ನಡಿಗರಿಗೆ ನ್ಯಾಯ ದೊರಕಬೇಕಾದರೆ ಹುಬ್ಬಳ್ಳಿಯಲ್ಲಿ ರೈಲ್ವೆ ವಲಯ ಆಗಬೇಕು ಎನ್ನುವುದು ನಮ್ಮ ವಾದ. ಕನ್ನಡದ ಎಲ್ಲಾ ಸಂಘ ಸಂಸ್ಥೆಗಳು ಹುಬ್ಬಳ್ಳಿಯಲ್ಲಿ ರೈಲ್ವೆ ವಲಯ ಆಗಬೇಕು ಎಂದು ಹೇಳಿವೆ.

ಅಧ್ಯಕ್ಷರು : ಬೇಡ ಅಂದವರು ಯಾರು? ಎಲ್ಲಿ ಮಾತನಾಡುತ್ತಿದ್ದೀರಿ? ಏನು ಮಾತನಾಡುತ್ತಿದ್ದೀರಿ ಎನ್ನುವುದು ಅರ್ಥವಾಗುವುದಿಲ್ಲವೇ?

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೇ, ಈ ಸದನದ ಹಿರಿಯ ಸದಸ್ಯರಾದ ಶ್ರೀ ನಂಜೇಗೌಡರು ಏನೊಂದು ಸಲಹೆ ಕೊಟ್ಟಿದ್ದಾರೆ, ಈ ರಾಜ್ಯಕ್ಕೆ ಮಧ್ಯಪ್ರದೇಶದ ರೀತಿಯಲ್ಲಿ ಎರಡು ರೈಲ್ವೆ ವಲಯಗಳ ಅಗತ್ಯತೆ ಇದೆ ಎನ್ನುವುದನ್ನು ನಾವೂ ಕೂಡ ಸಂಪೂರ್ಣವಾಗಿ ಸಮರ್ಥಿಸುತ್ತೇವೆ. ಈ ಮಾತು ನಿನ್ನೆ ಮೊನ್ನೆ ಬಂದಿದ್ದರೆ ಈ ಗೊಂದಲ ಆಗುತ್ತಿರಲಿಲ್ಲ. ಮಾನ್ಯ ನಂಜೇಗೌಡರು ಒಂದು ಮಾತು ಹೇಳಿದರು. ಶಾಂತಿ ಇರುವ ಕಡೆ ನೀರಿಗೆ ಕೆಲವರು ಕಲ್ಲು ಹಾಕುತ್ತಾರೆ ಗೊಂದಲ ಉಂಟಾಗುತ್ತದೆ ಎಂದು. ಗೊಂದಲ ಉಂಟಾಗುವ ಅಗತ್ಯವೇ ಇಲ್ಲ. ನಮಗೆ ಬಹಳಷ್ಟು ದಿವಸದಿಂದ ವಲಯ ಬೇಕಾಗಿತ್ತು ಅದು ಅಲ್ಲೋ ಆಗಲೇಬೇಕು ಎಂದು ವರ್ಷಗಟ್ಟಲೇ ಹೇಳುತ್ತಾ ಬಂದರು. ಈ ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಸಂಸದ್ ಸದಸ್ಯರು ಹೇಳಿದ್ದರಿಂದ ಆ ಜನರ ಬೇಡಿಕೆ ಏನಿದೆ ಅದು ಈಗ ಈಡೇರಿದೆ. ಮಾನ್ಯಕ ನಂಜೇಗೌಡರ ಸಲಹೆ ಏನಿದೆ ಅದನ್ನು ನಾವು ಸ್ವೀಕರಿಸಿ ನಮ್ಮ ರಾಜ್ಯಕ್ಕೆ ಬೇಕಾಗಿರುವ ಇನ್ನೊಂದು ವಲಯವನ್ನು ತರುವಂತಹ ಪ್ರಯತ್ನವನ್ನು ನಾವೆಲ್ಲರೂ ಸೇರಿಕೊಂಡು ಮಾಡೋಣ. ಇದರಲ್ಲಿ ಒಡಕು ಧ್ವನಿ ಬೇಡ. ಕೆಟ್ಟ ರಾಜಕೀಯ ಮಾಡುವುದು ಬೇಡ. ಹುಳುಕು ಹುಡುಕುವುದು ಬೇಡ. ಏನೋ ಇದನ್ನು ವಾಜಪೇಯಿ ಮಾಡಿಬಿಟ್ಟಿದ್ದಾರೆ ಎಂದು ಹುಳುಕು ಹುಡುಕುವುದನ್ನು ಯಾರೂ ಮಾಡುವುದು ಬೇಡ.

ಅಧ್ಯಕ್ಷರು : ಮಾಡಬಾರದು.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಇಲ್ಲಿ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಎಂದು ಬರುವುದಿಲ್ಲ. ಕರ್ನಾಟಕ ಎಂದರೆ ಒಂದೇನೇ ಆ ರೀತಿ ನೋಡಲೂ ಬಾರದು. ಪ್ರಗತಿ ದೃಷ್ಟಿಯಿಂದ ನೀರಾವರಿ, ವಿದ್ಯಾಭ್ಯಾಸ, ಕೆಲಸ ಕಾರ್ಖಾನೆಗಳ ಸ್ಥಾಪನೆ ದೃಷ್ಟಿಯಿಂದ ನಾವು ಎಲ್ಲಾ ಕಡೆ ಅಭಿವೃದ್ಧಿ ಆಗುವ ಹಾಗೆ ನೋಡಿಕೊಳ್ಳಬೇಕು ಎನ್ನುವುದಿರಬೇಕೋ ಹೊರತು ಕೆಲವರು ಕೊಡಗಿನ ಬಗ್ಗೆ ಮಾತನಾಡುವುದು, ಕೆಲವರು ಉತ್ತರ ಕರ್ನಾಟಕದ ಬಗ್ಗೆ ಮಾತನಾಡುವುದು ಕೆಲವರು ಕರ್ನಾಟಕದ

ಬಗ್ಗೆ ಮಾತನಾಡುವುದು, ಹಾಗೆ ಮಾತನಾಡಬಾರದು. ನಮ್ಮದು ಒಂದು ರಾಜ್ಯ. ಈ ರಾಜ್ಯ ಒಂದು ಆಗುವುದಕ್ಕೆ ಜನ ಎಷ್ಟು ಕಾಲ ಪ್ರಯತ್ನ ಮಾಡಿದರು. ಆದುದರಿಂದ ಇವತ್ತು ಏನು ಮಾನ್ಯ ನಂಜೇಗೌಡರು ಭಾವನಾತ್ಮಕವಾಗಿ ಹೇಳಿದರು. ಅವರ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಇಲ್ಲಿಯೂ ಇರಲಿ, ಅಲ್ಲಿ ಮಾಡುವುದಕ್ಕೆ ಬಂದಿರುವ ಕಷ್ಟವೇನು? ಒಂದು ಹೊಸ ಜೋನಲ್ ಹೆಡ್‌ಕ್ವಾರ್ಟ್ರಸ್ ತೆಗೆಯುವುದರಿಂದ ನೂರಾರು ಕೋಟಿ ಏನೂ ಬೇಕಾಗುವುದಿಲ್ಲ. ನಮ್ಮ ರಾಜ್ಯದ ಎಲ್ಲಾ ಸಂಸದ್ ಸದಸ್ಯರು ಹಾಗೂ ನಮ್ಮ ಎಲ್ಲಾ ವಿರೋಧ ಪಕ್ಷದ ನಾಯಕರುಗಳು ಒಂದು ಸಭೆ ಸೇರಿ ಪ್ರಧಾನಿಯವರಿಗೆ ಅಲ್ಲಿ ಒಂದು ವಲಯ ಮಾಡಿ ಎಂದು ಹೇಳೋಣ. ಏನು ತಪ್ಪು? ಆ ನಿಲುವು ತೆಗೆದುಕೊಳ್ಳಬೇಕೇ ಹೊರತು ಹುಬ್ಬಳ್ಳಿ ಎಂದರೆ ಉತ್ತರ ಕರ್ನಾಟಕ ಎಂದು ಮಾನ್ಯ ಚಂದ್ರಕಾಂತ್ ಬೆಲ್ಲದ್ ಹೇಳಿದ ಹಾಗೆ ಅಲ್ಲ.

ಶ್ರೀ ಜಿ. ಚಂದ್ರಕಾಂತ ಬೆಲ್ಲದ್ : ಸಮಗ್ರ ಕರ್ನಾಟಕ ದೃಷ್ಟಿಯಿಂದ ಹುಬ್ಬಳ್ಳಿ ಬಹಳ ಯೋಗ್ಯವಾದ ಸ್ಥಳ ಎಂದು ಹೇಳಿದೆ.

ಶ್ರೀ ಜೆ. ಹೆಚ್. ಪಟೇಲ್ : ನಿಮ್ಮ ಮಾತನ್ನು ನಾನು ಒಪ್ಪಿದೆ. ಆ ಸಮಗ್ರ ಭಾವನೆ ಎಲ್ಲರಿಗೂ ಬರಬೇಕು.

ಡಾ॥ ಎಂ.ಪಿ. ಕರ್ಕಿ : ಕೆಲವೊಂದು ಹಿಂದುಳಿದ ಪ್ರದೇಶಗಳಾಗಿದ್ದರೆ, ಅದನ್ನು ಸರ್ಕಾರದ ಗಮನಕ್ಕೆ ತರುವುದರಿಂದ ತೊಂದರೆ ಏನಿಲ್ಲ. ಆದರೆ ನಮಗೆ ತೊಂದರೆ ಎಂದು ಹೇಳುವುದು ರಾಜಕೀಯ ದೃಷ್ಟಿಯಿಂದ ಅಲ್ಲ, ಸಮಾಜದ ದೃಷ್ಟಿಯಿಂದ ರಾಜ್ಯದ ಒಳಿತಿನ ದೃಷ್ಟಿಯಿಂದ ತಂದರೆ ತಪ್ಪಾಗುವುದಿಲ್ಲ. ರಾಜಕೀಯ ಮಾಡಬಾರದು. ಅದರ ರಾಜಕೀಯ ತಿಳಿದುಕೊಳ್ಳಬೇಕಾಗಿಲ್ಲ.

ಅಧ್ಯಕ್ಷರು : ಮಾಡಬಾರದು. ಈಗ ಮಾಧುಸ್ವಾಮಿ ಹಾಗೂ ಮುದ್ದಹನುಮೇಗೌಡ ಅವರದ್ದು ಗಮನ ಸೆಳೆಯುವ ಸೂಚನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಒಂದು ಸ್ಟೇಟ್‌ಮೆಂಟ್ ಮಾಡಿಸಬೇಕು...

ಅಧ್ಯಕ್ಷರು : ಮಾಡಿಸುತ್ತೇನೆ. ಕೊನೆಯಲ್ಲಿ ಸಂಜೆ ಮಾಡಿಸುತ್ತೇನೆ. ರಾಜ್ಯಪಾಲರ ಭಾಷಣದ ಮೇಲೆ ಸದಸ್ಯರು ಮಾತನಾಡುವುದು ಇನ್ನು ಮುಂದಕ್ಕೆ ಹೋಗುತ್ತಿದೆ. ನಾಳೆ ಉತ್ತರ ಇದೆ.

ಗಮನ ಸೆಳೆಯುವ ವಿಷಯಗಳು

(ಅ) ಕರ್ನಾಟಕ ವಿದ್ಯುಚ್ಛಕ್ತಿ ಉಗ್ರಾಣಗಳನ್ನು ಆಯಾ ಉಪವಿಭಾಗದಲ್ಲಿ ಮುಂದುವರಿಸುವ ಬಗ್ಗೆ.

+ ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೇ, ಕೆ. ಇ.ಬಿ. ಉಪ ವಿಭಾಗಗಳಿಗೆ ಹೊಂದಿಕೊಂಡಂತೆ ಅಲ್ಲಿ ಉಗ್ರಾಣಗಳು ಇತ್ತು. ಆ ಉಗ್ರಾಣಗಳಿಂದ ಕೆ. ಇ.ಬಿ. ಯವರು ಸಾಮಗ್ರಿಗಳು ಕೊಡುವುದರ ಜೊತೆಗೆ ರೈತರೂ ಕೂಡ ಅವರಿಗೆ ಏನಾದರೂ ಸಾಮಗ್ರಿಗಳು ಬೇಕಾದರೆ ಅಲ್ಲಿಂದ ತೆಗದುಕೊಂಡು ಹೋಗುವಂತಹ ವ್ಯವಸ್ಥೆ ಬಹಳ ವರ್ಷಗಳಿಂದ ಈ ರಾಜ್ಯದಲ್ಲಿ ನಡೆದುಕೊಂಡು ಬಂದಿತ್ತು. ಕೆ. ಇ.ಬಿ. ಯವರಿಗೆ ಅವರದೇ ಲಾರಿಗಳಲ್ಲಿ